**ದಿನಾಂಕಃ 25.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ – ವಾದಿ ಪರ ಶ್ರೀ. ವಿ.ಎಂ.ಎನ್. ವಕೀಲರಿಂದ–**

ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲ ವಿಷಯಗಳನ್ನು ಓದಿ, ತಿಳಿದುಕೊಂಡು ಅದಕ್ಕೆ ನನ್ನ ಸಹಿಯನ್ನು ಹಾಕಿರುತ್ತೇನೆ. ಅದರಲ್ಲಿನ ಎಲ್ಲ ಸಂಗತಿಗಳು ಸತ್ಯವಾಗಿರುತ್ತವೆ. ಅದನ್ನು ನಾನೇ ಹೇಳಿ ಬರೆಸಿರುತ್ತೇನೆ.

1. ಕವಡಿಮಟ್ಟಿ ಗ್ರಾಮದ ಜಮೀನು ಸರ್ವೆ ನಂ. 95/6, 95/7, 95/8, 95/9, 95/10 ರ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–1 ರಿಂದ 5 ಎಂದು,
2. ನನ್ನ ತಾಯಿ ನನಗೆ ಮತ್ತು ನನ್ನ ಸಹೋದರಿಯರ ಹೆಸರಿನಲ್ಲಿ ಮೃತ್ಯು ಪತ್ರ ಮಾಡಿದ್ದು, ಅದನ್ನು ಹಾಜರುಪಡಿಸಿದ್ದು ನಿಪಿ–6 ಎಂದು ಗುರುತಿಸಲಾಯಿತು.

ದಾವೆಯಲ್ಲಿ ಕೇಳಿದಂತೆ ಆದೇಶ ಮಾಡಬೇಕಾಗಿ ವಿನಂತಿ.

**ಪಾಟೀ ಸವಾಲುಃ 1 ರಿಂದ 7 ಪ್ರತಿವಾದಿ ಪರ ಶ್ರೀ. ಎಸ್.ಆರ್.ಎ ವಕೀಲರಿಂದ.**

ನನ್ನ ತಂದೆಗೆ ಇಬ್ಬರು ಅಣ್ಣಂದಿರು ಇದ್ದರು ಎಂದರೆ ಸರಿ. ಅವರ ಹೆಸರು

ಶರಣಪ್ಪ, ಸಿದ್ದಪ್ಪ ಇರುತ್ತದೆ. ನನ್ನ ತಂದೆ ಮತ್ತು ಆತನ ಸಹೋದರರು ದಾವಾ ಜಮೀನುಗಳನ್ನು ಮೂರು ಭಾಗ ಮಾಡಿಕೊಂಡು ಪ್ರತ್ಯೇಕವಾಗಿ ಜಮೀನು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ಸದರಿ ಜಮೀನುಗಳು ಪೂರ್ವ ಪಶ್ಚಿಮ ಶೀಳಿ ಮೂರು ಪಟ್ಟೆಗಳನ್ನಾಗಿ ಮಾಡಿಕೊಂಡಿದ್ದು, ಅವು ಒಂದಕ್ಕೊಂದು ಹೊಂದಿಕೊಂಡಂತೆ ಇವೆ ಎಂದರೆ ಸರಿ. ನನ್ನ ತಂದೆಗೆ ಉತ್ತರ ಭಾಗದ ಜಮೀನು 4 ಎಕರೆ 19 ಗುಂಟೆ ಬಂದಿದೆ ಎಂದರೆ ಸರಿ. ದಕ್ಷಿಣ ಭಾಗದ 4 ಎಕರೆ 19 ಗುಂಟೆ ನನ್ನ ದೊಡ್ಡಪ್ಪನಾದ ಸಿದ್ದಪ್ಪ ಬಿತ್ತುವದು ಬೆಳೆಯುವುದು ಮಾಡುತ್ತಾರೆ ಎಂದರೆ ಸರಿ. ಮಧ್ಯದ ಜಮೀನುಗಳನ್ನು ದೊಡ್ಡಪ್ಪನ ಮಕ್ಕಳು ಬಿತ್ತುವದು ಬೆಳೆಯುವುದು ಮಾಡುತ್ತಾರೆ ಎಂದರೆ ಸರಿ. ಸದರಿ ಜಮೀನು 4 ಎಕರೆ 20 ಗುಂಟೆ ಇದೆ ಎಂದರೆ ಸರಿ. ಸದರಿ ಜಮೀನು ಹಂಚಿಕೊಂಡಂತೆ ನಮ್ಮ ದೊಡ್ಡಪ್ಪನ ಮಕ್ಕಳಿಗೆ ಜಮೀನು ಕೊಡಲು ತಕರಾರು ಇರುವದಿಲ್ಲ ಎಂದರೆ ಸರಿ.

**ಪಾಟೀ ಸವಾಲು:** 8, 9 ಮತ್ತು 11 ನೇ ಪ್ರತಿವಾದಿ ಪರ ಶ್ರೀ. ಎನ್.ಜಿ.ಕೆ ವಕೀಲರಿಂದ.

8, 9 ಮತ್ತು 11 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ಅವರು ಪ್ರತಿವಾದ ಪತ್ರ ಸಲ್ಲಿಸದೇ ಇರುವ ಕಾರಣ ಅವರ ಕೋರಿಕೆಯನ್ನು ತಿರಸ್ಕರಿಸಿ ಅವರ ಪರ ಪಾಟೀ ಸವಾಲು ಇಲ್ಲ ಎಂದು

ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ** 10 ಮತ್ತು 12 ನೇ ಪ್ರತಿವಾದಿಯರ ವಿರುದ್ಧ ಏಕಪಕ್ಷೀಯ ಆದೇಶವಾಗಿರುವದರಿಂದ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ತೆ ನ್ಯಾ ನನ್ನ ಹೇ ಬೆ ಮಾಡಲಾಗಿದೆ)

ನನ್ನ ಸಮಕ್ಷಮ,

ಓ.ಹೇ.ಕೇ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಮುದ್ದೇಬಿಹಾಳ